ನಂಬರ್ ಪ್ಲೇಟ್‌ಗಳಿಲ್ಲದ ವಾಹನಗಳು

47(1157); **ಶ್ರೀ ಅಶೋಕ್ ಆರ್.**

ಅ) ರಾಜ್ಯದಲ್ಲಿ ನಂಬರ್ ಪ್ಲೇಟ್‌ಗಳು ಇಲ್ಲದ ವಾಹನಗಳನ್ನು ಗುರುತಿಸಲಾಗಿದೆಯೇ; (ಜಿಲ್ಲಾವಾರು ವಿವರ ಒದಗಿಸುವುದು)

ಆ) ನಂಬರ್ ಪ್ಲೇಟ್ ಇಲ್ಲದ ಹಾಗೂ ನಂಬರ್ ಪ್ಲೇಟ್‌ಗಳನ್ನು ಅಕ್ರಮವಾಗಿ ನಕಲಿ ಮಾಡಿಕೊಂಡು ಸಂಚರಿಸುತ್ತಿರುವ ವಾಹನಗಳ ತಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ರೀತಿಯ ಪ್ರಕರಣಗಳ ತಡೆಗೆ ಹಾಗೂ ಪತ್ತೆಗೆ ಮುಂದಾದ ಸಾರಿಗೆ ಅಧಿಕಾರಿಗಳ ಮೇಲೆ ಧಮಕಿ ಮತ್ತು ಬೆದರಿಕೆ ಹಾಕಿರುವ ಪ್ರಕರಣಗಳು ಬೆಳಕಿಗೆ ಬಂದಿದೆಯೇ;

ಈ) ಅದೇ ರೀತಿ ನಂಬರ್ ಪ್ಲೇಟ್‌ಗಳ ಮೇಲೆ ಬರೆಯುವ ಅಕ್ಷರಗಳ ಮೇಲೆ ನಿಗಾವಹಿಸಲು ಯಾವ ಕ್ರಮಕ್ಕೆ ಮುಂದಾಗಿದೆ;

ಉ) ವಾಹನ ಸವಾರರಿಗೆ ಬೇಕಾದಂತೆ ಬರೆಸಿಕೊಳ್ಳಲು ಅವಕಾಶವಿದೆಯೇ; ಇದನ್ನು ತಡೆಯುವಲ್ಲಿ ಸಾರಿಗೆ ಇಲಾಖೆ ವಿಫಲವಾಗಿರುವುದು ನಿಜವೇ; ಇದರ ನಿವಾರಣೆಗೆ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ವಿವರ ಒದಗಿಸುವುದು)?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಹೌದು, ಬಂದಿರುತ್ತದೆ. ಅಂತಹ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು ಪ್ರತ್ಯೇಕವಾಗಿ **ಅನುಬಂಧ–ಅ** ನಲ್ಲಿ ನೀಡಲಾಗಿದೆ.

ಆ) ನಿಯಮಬಾಹಿರವಾಗಿ ನಂಬರ್ ಪ್ಲೇಟ್ ಇಲ್ಲದೆ ಹಾಗೂ ನಂಬರ್ ಪ್ಲೇಟ್‌ಗಳನ್ನು ಅಕ್ರಮವಾಗಿ ನಕಲಿ ಮಾಡಿಕೊಂಡು ಸಂಚರಿಸುತ್ತಿರುವ ವಾಹನಗಳನ್ನು ತಪಾಸಣೆ ಮಾಡಿ ತಪ್ಪಿತಸ್ಥ ಪ್ರಕರಣಗಳಲ್ಲಿ ಮೋಟಾರು

ವಾಹನ ಕಾಯ್ದೆ ಮತ್ತು ನಿಯಮಗಳಡಿ ಪ್ರಕರಣಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಅಂತಹ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ವಾಹನ ನೋಂದಣಿ ಫಲಕಗಳನ್ನು ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 50 ಹಾಗೂ 51ರಲ್ಲಿ ನಿಗದಿಪಡಿಸಿರುವಂತೆ ಅಳವಡಿಸಬೇಕಾಗುತ್ತದೆ. ಸದರಿ ನಂಬರ್ ಪ್ಲೇಟ್‌ಗಳ ಮೇಲೆ ನಿಯಮಬಾಹಿರವಾಗಿ ಅಕ್ಷರಗಳನ್ನು ಬರೆಸಿರುವುದು ಕಂಡುಬಂದಲ್ಲಿ, ಅಂತಹ ವಾಹನ ಮಾಲೀಕರ ವಿರುದ್ಧ ನಿಯಮಾನುಸಾರ ಪ್ರಕರಣಗಳನ್ನು ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ವಿವರಗಳನ್ನು **ಅನುಬಂಧ–ಅ** ನಲ್ಲಿ ನೀಡಲಾಗಿದೆ.

ಉ) ವಾಹನ ಸವಾರರು ತಮಗೆ ಬೇಕಾದಂತೆ ನಂಬರ್ ಪ್ಲೇಟ್ ಬರೆಸಿಕೊಳ್ಳಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

ನಿಯಮ ಬಾಹಿರವಾಗಿ ನೋಂದಣಿ ಫಲಕಗಳ ಮೇಲೆ ಅಕ್ಷರಗಳನ್ನು ಬರೆಸಿಕೊಳ್ಳುವ ವಾಹನ ಮಾಲೀಕರ ವಿರುದ್ಧ ತೀವ್ರವಾಗಿ ತಪಾಸಣೆಯನ್ನು ಮಾಡಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ರೀತಿ ಪ್ರಕರಣಗಳನ್ನು ದಾಖಲಿಸಿದ ಜಿಲ್ಲಾವಾರು ವಿವರಗಳನ್ನು **ಅನುಬಂಧ–ಅ** ನಲ್ಲಿ ನೀಡಲಾಗಿದೆ.

ಅನುಬಂಧ–ಅ

ದಿನಾಂಕ: 01–04–2014 ರಿಂದ 31–05–2015ರ ವರೆಗೆ ರಾಜ್ಯದಲ್ಲಿ ನಂಬರ್ ಪ್ಲೇಟ್ ಇಲ್ಲದೆ / ನಿಯಮಬಾಹಿರವಾಗಿ ನಂಬರ್ ಪ್ಲೇಟ್ ಮೇಲೆ ಅಕ್ಷರಗಳನ್ನು ಬರೆಸಿದ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ ವಿವರಗಳು.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪ್ರಕರಣಗಳ ಸಂಖ್ಯೆ	ವಸೂಲಿಸಿದ ದಂಡದ ಮೊತ್ತ (ರೂ.ಗಳಲ್ಲಿ)
1	ಬೆಂಗಳೂರು	823	165350
2	ರಾಮನಗರ	57	5700
3	ತುಮಕೂರು	49	4900
4	ಚಿಕ್ಕಬಳ್ಳಾಪುರ	56	5600
5	ಚಾಮರಾಜನಗರ		600
6	ದಾವಣಗೆರೆ	1725	172500
7	ಮಂಗಳೂರು	104	10400
8	ಉಡುಪಿ	18	1800
9	ಬೆಳಗಾವಿ	61	6100
10	ಚಿಕ್ಕೋಡಿ	32	3200
11	ಗೋಕಾಕ್	45	4500
12	ಧಾರವಾಡ	25	25500
13	ಗದಗ	55	5500
14	ಹಾವೇರಿ	26	2600
15	ಬಾಗಲಕೋಟೆ	151	24400
16	ಕಾರವಾರ	68	6800
	ಒಟ್ಟು	**3531**	**445450**

ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು) (ಮಾನ್ಯ ಸಾರಿಗೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರ ಪರವಾಗಿ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಎಲ್ಲರೂ ಪರವಾಗಿ ಎಂದು ಹೇಳುತ್ತಿದ್ದಾರೆ. ಆ ಸಚಿವರುಗಳಿಗೆ ವಿಧಾನಸಭೆಯಲ್ಲಿ duty ಇದೆಯೋ, ವಿಧಾನ ಪರಿಷತ್ತಿನಲ್ಲಿ duty ಇದೆಯೋ ಅಥವಾ ತಮ್ಮ ಹತ್ತಿರ ಏನಾದರೂ ಅನುಮತಿ ತೆಗೆದುಕೊಂಡು ಹೋಗಿದ್ದಾರೋ?

ಅಧ್ಯಕ್ಷರು:– ಅನುಮತಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:– ಮಾನ್ಯ ಕಾಗೇರಿಯವರೆ ಹೇಗೆ ನಿಮ್ಮ ಅಶೋಕ್‌ರವರು ಹೋಗಿದ್ದಾರೆ, ಆ ರೀತಿ ಅವರು ಹೋಗಿರುತ್ತಾರೆ ಅಷ್ಟೆ. ಏಕೆ ತಲೆಕೆಡಿಸಿಕೊಳ್ಳುತ್ತೀರಿ? ಅವರ ಪರವಾಗಿ ಸರ್ಕಾರ ಉತ್ತರ ಕೊಡುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಎರಡು ತಿಂಗಳಿನಲ್ಲಿ ನಂಬರ್ ಪ್ಲೇಟ್ ಇಲ್ಲದೇ ಇರುವಂತಹ 3,531 ವಾಹನಗಳನ್ನು ಗುರುತಿಸಿದ್ದಾರೆ. ನಂಬರ್ ಪ್ಲೇಟ್ ಸಮರ್ಪಕವಾಗಿಲ್ಲದೇ ಇರುವುದರಿಂದ ಯಾರು ಕಾನೂನು ಬಾಹಿರವಾಗಿ ಕೃತ್ಯ ಮಾಡುವವರು ಇದ್ದಾರಲ್ಲಾ, ಅವರೆಲ್ಲರೂ duplicate number plate ಇಟ್ಟುಕೊಂಡು ಒಂದು ಕಡೆ ಇಲ್ಲಿ ಕಳವು ಮಾಡುತ್ತಾರೆ. ಗಾಡಿ ಬದಲಿಸಿಕೊಂಡು ಇನ್ನೊಂದು ನಂಬರ್ ಪ್ಲೇಟ್ ಹಾಕಿಕೊಂಡು ಹೋಗುತ್ತಾರೆ. ಈ ರೀತಿ duplicate number plate ಅನ್ನು ಬಳಸಿ ಎಲ್ಲಾ ಅಪರಾಧಿ ಕೃತ್ಯವನ್ನು ಮಾಡುತ್ತಿರುವುದರಿಂದ ಬಹಳ ದೊಡ್ಡ ಪ್ರಮಾಣದ ಕಾನೂನು ಬಾಹಿರ ಚಟುವಟಿಕೆ ಆಗುತ್ತಿದೆ. ಇದರ ಹಿನ್ನೆಲೆಯಲ್ಲಿ ನಾನು ಕೇಳುತ್ತಿರುವುದು, ಸರ್ಕಾರದಿಂದಲೇ, ಆರ್.ಟಿ.ಓ,ದವರೇ ಗಾಡಿ registration ಗೆ ಹೋಗುತ್ತಾರೆ. Registration ಗೆ ಹೋಗುವಾಗ ಯಾವ್ಯಾವ ಗಾಡಿಗೆ ಯಾವ್ಯಾವ ರೀತಿ ನಂಬರ್ ಪ್ಲೇಟ್ ಇರಬೇಕೆಂದು ಇದೆ. ಅದು

ಯಾವ್ಯಾವ size ನದ್ದು, ಯಾವ್ಯಾವ colour ನದ್ದು RTO ನವರೇ ಕೊಡುವುದಕ್ಕೆ ಸರ್ಕಾರ ಏನು ಯೋಚನೆ ಮಾಡಿದೆ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ನಂಬರ್ ಪ್ಲೇಟ್‌ಗೆ ಸಂಬಂಧಪಟ್ಟ ಹಾಗೆ, ಕೇಂದ್ರ ಸರ್ಕಾರ, ಕೇಂದ್ರ ಮೋಟಾರು ವಾಹನ ನಿಯಮಾವಳಿಗಳ ಪ್ರಕಾರ ಎಷ್ಟು ಅಳತೆ ಇರಬೇಕು, ಯಾವ ರೀತಿ ಇರಬೇಕು ಎನ್ನುವುದು ಬಹಳ ಸ್ಪಷ್ಟವಾಗಿದೆ. ಆದರೂ ತಾವು ಹೇಳಿದ ಹಾಗೆ ವಾಡಿಕೆಯಲ್ಲಿ ಆ ಒಂದು ನಿಖರತೆಯನ್ನು ನಾವು ಯಾರೂ ಸಹ ವಾಲನೆ ಮಾಡುತ್ತಿಲ್ಲ. ಆ ಹಿನ್ನೆಲೆಯಲ್ಲಿ ಸುಮಾರು 3,531 ಕೇಸ್‌ಗಳನ್ನು ದಾಖಲು ಮಾಡಿದ್ದೇವೆ. ಆದರೂ ಬಹುಶಃ ತಾವು ಹೇಳುತ್ತಿರುವುದು ಸಾಲುವುದಿಲ್ಲ. ಅದನ್ನು ಇನ್ನಷ್ಟು ತೀವ್ರ ಮಾಡುವುದು ಒಂದು ಕಡೆ. ಇನ್ನೊಂದು ಕಡೆ ರಾಷ್ಟ್ರ ಮಟ್ಟದಲ್ಲಿ ಬಹಳ ನಿರ್ದಿಷ್ಟವಾದಂತಹ ನಂಬರ್ ಪ್ಲೇಟ್ ಅನ್ನು ಅಳವಡಿಸಬೇಕೆಂದು ಹಿಂದಿನಿಂದಲೂ ಒಂದು ಚರ್ಚೆ ಮತ್ತು ಅದಕ್ಕೆ ಸಂಬಂಧಪಟ್ಟ ತೀರ್ಮಾನಗಳಾಗಿ, ರಾಜ್ಯ ತೆಗೆದುಕೊಂಡು ತೀರ್ಮಾನಗಳು ಕೋರ್ಟಿಗೆ ಹೋಗಿ ತಡೆಯನ್ನು ತೆಗೆದುಕೊಂಡು ಬಂದಿರುವುದರಿಂದ ಬಹುಶ: high security number plate ಅನ್ನು ವಾಹನಕ್ಕೆ fix ಮಾಡುವಂಥದ್ದು, ಅದನ್ನು tamper ಮಾಡುವುದಕ್ಕೂ ಆಗುವುದಿಲ್ಲ. ಬದಲಾವಣೆ ಮಾಡುವುದಕ್ಕೂ ಆಗುವುದಿಲ್ಲ. ಕೋರ್ಟ್‌ನ ತಡೆಯಾಜ್ಞೆ clear ಆದಾಗ high security number plate clear ಆದರೆ ಆಗ ಬಹುಶ: ಈ ಸಮಸ್ಯೆ ಪರಿಹಾರವಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಒಬ್ಬೊಬ್ಬರು ನಂಬರ್ ಪ್ಲೇಟ್ ಹಾಕಿಕೊಳ್ಳುವುದನ್ನು ನೋಡಿದರೆ RTO ಇಲಾಖೆ ಅಥವಾ ಪೊಲೀಸ್ ಇಲಾಖೆ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದೆಯೋ ಇಲ್ಲವೋ ಎನ್ನುವುದು ಅನುಮಾನವಾಗಿದೆ. Fancy number ಇರುವುದು ಬೇರೆ ವಿಚಾರ.

ಅಧ್ಯಕ್ಷರು:– ಉತ್ತರದಲ್ಲಿ ವಾಹನ ಸವಾರರು ತಮಗೆ ಬೇಕಾದಂತೆ ನಂಬರ್ ಪ್ಲೇಟ್ ಬರೆಸಿಕೊಳ್ಳಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ ಎಂದು ಇದೆಯಲ್ಲಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಿಯಮದಲ್ಲಿ ಇಲ್ಲ ಸಾರ್, ಆದರೆ ನಿಯಮ ಮೀರಿ ಬರೆಸಿಕೊಳ್ಳುತ್ತಿರುವವರಿಗೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಅಧ್ಯಕ್ಷರು:– ಅಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಎರಡು ತಿಂಗಳಿನಲ್ಲಿ 3,500 ನಂಬರ್ ಪ್ಲೇಟ್ ಮಾಡಿದ್ದಾರೆ. ಆದರೆ ಸರ್ಕಾರ ಮನಸೋ ಇಚ್ಛೆ ಹೇಗೆ ಬೇಕೋ ಹಾಗೆ ನಂಬರ್ ಪ್ಲೇಟ್ ಬರೆಸಿಕೊಳ್ಳುವವರ ಮೇಲೆ serious ಆಗಿ ಒಂದು drive ಮಾಡಿ ಹೇಳಿ. ಸಾರ್ವಜನಕಪಡಿಸಿ. ಒಂದೊಂದು ನಂಬರ್ ಪ್ಲೇಟ್ ಅನ್ನು ನೀವು ನೋಡಬೇಕು.

ಅಧ್ಯಕ್ಷರು:– ಆಯಿತು, ಅದರ ಬಗ್ಗೆ description ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಒಂದೇ ರೀತಿ ನಂಬರ್ ಪ್ಲೇಟ್ ಇಲ್ಲದೇ ಇರುವುದರಿಂದ ದೊಡ್ಡ ತೊಂದರೆಯಾಗುತ್ತಿದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ಅಧ್ಯಕ್ಷರು:– ತಾವು ಈ ರೀತಿ ಮಾತನಾಡಿದರೆ ಇದು ಪ್ರಶ್ನೆ ಆಗುವುದಿಲ್ಲ. ಚರ್ಚೆ ರೀತಿ ಆಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದು ನಿಜ. ಇದರ ಬಗ್ಗೆ ವಿಶೇಷವಾದ ಅಭಿಯಾನವನ್ನು ಮಾಡಬೇಕಾಗುತ್ತದೆ. ನಾವು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ. ವಿಶೇಷ ಅಭಿಯಾನ ಮಾಡಿ ಮಾನದಂಡಗಳಿಗೆ ತಕ್ಕಹಾಗೆ ಬೋರ್ಡ್‌ಗಳನ್ನು ಅಳವಡಿಸಿಕೊಳ್ಳುವುದಕ್ಕೆ normal ಆಗಿ ಏನು ಮಾಡುತ್ತಿದ್ದೇವೆ, ಅದರ ಜೊತೆಗೆ ಹೆಚ್ಚಿನ ಒತ್ತು ಕೊಟ್ಟು ಮಾಡುವಂತಹ ಸೂಚನೆಯನ್ನು ಕೊಡುತ್ತಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್:– ಯಾರು ಏನು ಬೇಕಾದರೂ ಬರೆಸಿಕೊಳ್ಳುವ ಹಾಗೆ ಆಗಿದೆ. ಹಸಿರು ಬಣ್ಣದ ನಂಬರ್ ಪ್ಲೇಟ್‌ನಲ್ಲಿ ಯಾವುದೋ ಅಧ್ಯಕ್ಷ, ಯಾವುದೋ ದಳದ ಹೆಸರನ್ನು ಬರೆಸಿಕೊಂಡಿರುತ್ತಾರೆ.

ಅಧ್ಯಕ್ಷರು:– ಆ ರೀತಿ ಇಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್:– ಇದೆ. ರಾಜಾರೋಷವಾಗಿ ಯಾರು ಏನು ಬೇಕಾದರೂ ಬರೆಸಿಕೊಳ್ಳುತ್ತಿದ್ದಾರೆ. ಕಾನೂನಿಗೆ ಒಂದು ಚೂರು ಬೆಲೆ ಕೊಡುತ್ತಿಲ್ಲ. ಅದರ ಬಗ್ಗೆಯೂ ದಯವಿಟ್ಟು ಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಕೃಷ್ಣ ಬೈರೇಗೌಡ:– ನಂಬರ್ ಪ್ಲೇಟ್‌ನಲ್ಲಿ ಏನಾದರೂ ಬರೆದುಕೊಂಡರೆ, ಶಾಸಕ ಎಂದು ಬರೆಸಿಕೊಳ್ಳುವುದೂ ಕೂಡ ಕಾನೂನಿನ ಪ್ರಕಾರ ಉಲ್ಲಂಘನೆಯಾಗುತ್ತದೆ. ನಾವುಗಳೆಲ್ಲಾ ಮನಸ್ಸು ಮಾಡಿದರೆ ಬಹುಶ: ರಾಜ್ಯದ ಜನಗಳಿಗೂ ಸಹ ನಾವು ದಾರಿಗೆ ತರಬಹುದು. ಅದು ಇಲ್ಲಿಂದ ಸಂಕಲ್ಪ ಆಗಬೇಕು. ನಮ್ಮನ್ನು ನೋಡಿ ಸಣ್ಣವರು, ಬೇರೆಯವರು ಮತ್ತೊಬ್ಬರು ಎಲ್ಲರೂ ಸಹ ಚಾಲನೆ ಮಾಡುತ್ತಾರೆ.

ಅಧ್ಯಕ್ಷರು:– ಮೊದಲು ಅವರಿಗೇ ಹಾಕಿ.

ಶ್ರೀ ಕೃಷ್ಣ ಬೈರೇಗೌಡ:– ನಾವೂ ಕಾನೂನಿಗೆ ಗೌರವ ಕೊಟ್ಟರೆ ಬೇರೆಯವರು ಗೌರವ ಕೊಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್:– ಖಂಡಿತ ನಾನು ಹಾಕಿಕೊಂಡಿಲ್ಲ.

ಶ್ರೀ ಕೃಷ್ಣ ಬೈರೇಗೌಡ ನೀವಲ್ಲ.

ಅಧ್ಯಕ್ಷರು:– ಮಾನ್ಯ ಬಾದರ್ಲಿ ಹಂಪನಗೌಡರವರು ಹಾಜರಿಲ್ಲ. ಮಾನ್ಯ ಕೆ.ಎಸ್. ಪುಟ್ಟಣ್ಣಯ್ಯನವರು ಮಾತನಾಡುವುದು.